**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಆರನೇ ಅಧಿವೇಶನ**

**(ಮುಂದುವರೆದ ಉಪವೇಶನ)**

# ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 15)**

ನೋಂದಣಿ ಅಧಿನಿಯಮ, 1908ನ್ನು ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ನೋಂದಣಿ ಅಧಿನಿಯಮ, 1908ನ್ನು (1908ರ ಕೇಂದ್ರ ಅಧಿನಿಯಮ 16) ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ಮತ್ತುಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 32ನೇ ಪ್ರಕರಣದ ತಿದ್ದುಪಡಿ.–** ನೋಂದಣಿ ಅಧಿನಿಯಮ, 1908ರ (1908ರ ಕೇಂದ್ರ ಅಧಿನಿಯಮ 16) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 32ನೇ ಪ್ರಕರಣದಲ್ಲಿ "ಮತ್ತು 89ನೇ ಪ್ರಕರಣಗಳಲ್ಲಿ ನಮೂದಿಸಿದ" ಎಂಬ ಪದಗಳ ತರುವಾಯ "ಅಥವಾ ವಿದ್ಯುನ್ಮಾನ ಸಾಧನದ ಮೂಲಕ ದಸ್ತಾವೇಜನ್ನು ಸಲ್ಲಿಸಿದ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. 34ನೇ ಪ್ರಕಣದ ತಿದ್ದುಪಡಿ.–** ಮೂಲ ಅಧಿನಿಯಮದ 34ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕಣದಲ್ಲಿ, ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನದ ಮೂಲಕ ಸಲ್ಲಿಸಿದಾಗ, ವೈಯಕ್ತಿಕ ಉಪಸ್ಥಿತಿಯ ಅಗತ್ಯವಿರತಕ್ಕದ್ದಲ್ಲ."

(ಬಿ) (3)ನೇ ಉಪಪ್ರಕರಣದಲ್ಲಿ, (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಅಲ್ಲದೆ ಪರಂತು, ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನದ ಮೂಲಕ ಸಲ್ಲಿಸಿದಾಗ, ವಿಚಾರಣೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಡೆಸತಕ್ಕದ್ದು."

**4. 35ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 35ನೇ ಪ್ರಕರಣದಲ್ಲಿ,–

(ಎ) (1)ನೇ ಉಪಪ್ರಕರಣದ (ಎ) ಖಂಡದಲ್ಲಿ "ಖುದ್ದಾಗಿ ಹಾಜರಾದರೆ" ಎಂಬ ಪದಗಳ ತರುವಾಯ "ಅಥವಾ ಸಂದರ್ಭಾನುಸಾರವಾಗಿ ವಿದ್ಯುನ್ಮಾನ ಸಾಧನದ ಮೂಲಕ ಸಲ್ಲಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (2)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಂಥ ದಸ್ತಾವೇಜನ್ನು ವಿದ್ಯುನ್ಮಾನ ಸಾಧನದ ಮೂಲಕ ಸಲ್ಲಿಸಿದರೆ, ವ್ಯಕ್ತಿಯನ್ನು ಪರಿಶೀಲನೆ ಮಾಡುವುದಕ್ಕಾಗಿನ ಪ್ರಕ್ರಿಯೆಯು ನಿಯಮಿಸಬಹುದಾದಂತೆ ಇರತಕ್ಕದ್ದು ಮತ್ತು ನೋಂದಣಿ ಅಧಿಕಾರಿಯು ಆ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು."

**5. 69ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 69ನೇ ಪ್ರಕರಣದಲ್ಲಿ, (1)ನೇ ಉಪಪ್ರಕರಣದ (ಎಲ್)ನೇ ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಎಂ) ದಸ್ತಾವೇಜನ್ನು ವಿದ್ಯುನ್ಮಾನ ಸಾಧನದ ಮೂಲಕ ಸಲ್ಲಿಸಿದಾಗ ದಸ್ತಾವೇಜಿನ ಹಾಜರುಪಡಿಸುವಿಕೆ, ಪ್ರವೇಶಕ್ಕಾಗಿ ಹಾಜರಾತಿ, ಹಿಂಬರಹ, ಸಹಿ ಮತ್ತು ಮೊಹರನ್ನು ಹಾಕುವ ವಿಧಾನ, ನೋಂದಣಿ ಶುಲ್ಕ ಮತ್ತು ಇತರ ಶುಲ್ಕಗಳ ಸಂದಾಯದ ವಿಧಾನ ಮತ್ತು ಅಂಥ ಇತರ ಪ್ರಕ್ರಿಯೆಗಳನ್ನು ನಿಯಮಿಸಬಹುದಾದಂತೆ ನಿಯಂತ್ರಿಸುವುದು."

**6. 89ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 89ನೇ ಪ್ರಕರಣದಲ್ಲಿ,–

(i) (2)ನೇ ಉಪಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ 5) ಅಡಿಯಲ್ಲಿ ಸ್ಥಿರಸ್ವತ್ತಿನ ಮಾರಾಟವನ್ನು ಪರಿಣಾಮಗೊಳಿಸುವ ಆದೇಶ ಅಥವಾ ಡಿಕ್ರಿ ಅಥವಾ ಪ್ರಮಾಣಪತ್ರವನ್ನು ಮಂಜೂರು ಮಾಡುವ ಪ್ರತಿಯೊಂದು ನ್ಯಾಯಾಲಯವು, ಅಂಥ ಆದೇಶ ಅಥವಾ ಡಿಕ್ರಿ ಅಥವಾ ನೋಂದಣಿ ಮಾರಾಟ ಪ್ರಮಾಣಪತ್ರದಲ್ಲಿ ಒಳಗೊಂಡಿರುವ ಸ್ಥಿರ ಸ್ವತ್ತಿನ ಪೂರ್ಣ ಅಥವಾ ಯಾವುದೇ

ಭಾಗವು ಯಾವ ಅಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವುದೋ ಆ ನೋಂದಣಿ ಅಧಿಕಾರಿಗೆ ಅಂಥ ಆದೇಶ ಅಥವಾ ಡಿಕ್ರಿ ಅಥವಾ ಪ್ರಮಾಣಪತ್ರದ ದೃಢೀಕೃತ ಪ್ರತಿಯನ್ನು ಭೌತಿಕವಾಗಿಯಾಗಲೀ/ಕೈಯಾರೆಯಾಗಿಯಾಗಲೀ ಅಥವಾ ವಿದ್ಯುನ್ಮಾನ ಸಾಧನದ ಮೂಲಕವಾಗಿಯಾಗಲೀ ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅದನ್ನು ತನ್ನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲು ಮಾಡತಕ್ಕದ್ದು ಅಥವಾ ವಿದ್ಯುನ್ಮಾನ ಅಥವಾ ಸಂದರ್ಭಾನುಸಾರ ಇತರ ಉಪಕರಣದಲ್ಲಿ ಸ್ಕ್ಯಾನ್ ಮಾಡತಕ್ಕದ್ದು, ಸಂಗ್ರಹಣೆ ಮಾಡತಕ್ಕದ್ದು ಮತ್ತು ಸಂರಕ್ಷಣೆ ಮಾಡತಕ್ಕದ್ದು:

ಪರಂತು, ಒಂದಕ್ಕಿಂತ ಹೆಚ್ಚಿನ ನೋಂದಣಿ ಕಚೇರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಮಿತಿಗಳೊಳಗೆ ಸ್ಥಿರ ಸ್ವತ್ತು ಇದ್ದಲ್ಲಿ, 64 ರಿಂದ 66ನೇ ಪ್ರಕರಣಗಳಲ್ಲಿ ಹೇಳಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು."

(ii) (4)ನೇ ಉಪಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(5) ಸಾಲಗಳ ಮರುಪಾವತಿಯನ್ನು ಪಡೆಯುವ ಉದ್ದೇಶಕ್ಕಾಗಿ, ಕರ್ನಾಟಕ ಕೃಷಿ ಕ್ರೆಡಿಟ್ ಆಪರೇಟರುಗಳು ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, 1974ರ (1975ರ ಕರ್ನಾಟಕ ಅಧಿನಿಯಮ 2) ಅಡಿಯಲ್ಲಿ ಸರಳ ಅಡಮಾನ ಪತ್ರಗಳು ಮತ್ತು ಸ್ವತ್ತು ವರ್ಗಾವಣೆ ಅಧಿನಿಯಮ, 1882ರ (1882ರ ಅಧಿನಿಯಮ ಸಂಖ್ಯೆ IV) 58 (ಎಫ್) ಪ್ರಕರಣದ ಅಡಿಯಲ್ಲಿ ಸ್ವಾಮ್ಯ ಪತ್ರಗಳ (ಟೈಟಲ್ ಡೀಡ್) ಠೇವಣಿ ರೂಪದಲ್ಲಿ ಸ್ಥಿರಸ್ವತ್ತನ್ನು ಅಡಮಾನ ಮಾಡಿದ್ದಲ್ಲಿ, ಸಾಲವನ್ನು ಮಂಜೂರು ಮಾಡುವ ಬ್ಯಾಂಕುಗಳು ಅಥವಾ ಇತರ ಹಣಕಾಸು ಸಂಸ್ಥೆಗಳು, ಪೂರ್ಣಸ್ವತ್ತು ಅಥವಾ ಸ್ವತ್ತಿನ ಯಾವುದೇ ಭಾಗವು ಇರುವ ಅಧಿಕಾರವ್ಯಾಪ್ತಿಯೊಳಗಿರುವ ನೋಂದಣಿ ಅಧಿಕಾರಿಗೆ ಭೌತಿಕವಾಗಿಯಾಗಲೀ/ಕೈಯಾರೆಯಾಗಲೀ ಅಥವಾ ವಿದ್ಯುನ್ಮಾನ ಮೂಲಕವಾಗಿಯಾಗಲೀ, ತೀರಿಕೆ ಪತ್ರಗಳು ಒಳಗೊಂಡಂತೆ, ಸ್ವತ್ತುಗಳು, ಪಕ್ಷಕಾರರು ಮತ್ತು ಅದರಲ್ಲಿ ಒಳಗೊಂಡಿರುವ ಇತರ ವಿವರಗಳ ಪೂರ್ಣ ವಿವರಣೆಗಳನ್ನು ಒಳಗೊಂಡಿರುವ ಅಂಥ ಡೀಡ್ ಅಥವಾ ಪತ್ರ ಅಥವಾ ಟಿಪ್ಪಣಿ ಅಥವಾ ಜ್ಞಾಪನಾ ಪತ್ರದ ದೃಢೀಕೃತ ನಕಲನ್ನು ಕಳುಹಿಸತಕ್ಕದ್ದು ಮತ್ತು ನೋಂದಣಿ ಅಧಿಕಾರಿಯು ಅಂಥ ಪತ್ರ ಅಥವಾ ಟಿಪ್ಪಣಿ ಅಥವಾ ಜ್ಞಾಪನಾ ಪತ್ರವನ್ನು ಪುಸ್ತಕ ಸಂಖ್ಯೆ:1ರಲ್ಲಿ ಇಡತಕ್ಕದ್ದು ಅಥವಾ ವಿದ್ಯುನ್ಮಾನ ಸಾಧನ ಅಥವಾ ಸಂದರ್ಭಾನುಸಾರವಾಗಿ ಇತರ ಉಪಕರಣದಲ್ಲಿ ಸ್ಕ್ಯಾನ್ ಮಾಡತಕ್ಕದ್ದು, ಸಂಗ್ರಹಣೆ ಮಾಡತಕ್ಕದ್ದು ಮತ್ತು ಸಂರಕ್ಷಿಸತಕ್ಕದ್ದು:

ಪರಂತು, ಒಂದಕ್ಕಿಂತ ಹೆಚ್ಚಿನ ನೋಂದಣಿ ಕಚೇರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಮಿತಿಗಳೊಳಗೆ ಸ್ಥಿರ ಸ್ವತ್ತು ಇದ್ದಲ್ಲಿ, 64 ರಿಂದ 66ನೇ ಪ್ರಕರಣಗಳಲ್ಲಿ ಹೇಳಲಾದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2015–16ರ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ, ಮಾರಾಟ ಒಪ್ಪಂದ, ಗೇಣಿ ಪತ್ರ ಮತ್ತು ಅನುಮತಿ ಮತ್ತು ಲೈಸೆನ್ಸ್ ಒಪ್ಪಂದಗಳ ಆನ್‌ಲೈನ್ ನೋಂದಣಿಗಾಗಿ ಮತ್ತು ನ್ಯಾಯಾಲಯ ಆದೇಶಗಳು, ಡಿಕ್ರಿಗಳು ಹಾಗೂ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಕಳುಹಿಸುವ ಸ್ವಾಮ್ಯ ಪತ್ರ ಮುಂತಾದವುಗಳ ಠೇವಣಿ ರೂಪದಲ್ಲಿ ಅಡಮಾನಗಳ ಯಥಾ ಪ್ರತಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸಲು ಉಪಬಂಧವನ್ನು ಕಲ್ಪಿಸಲು, ನೋಂದಣಿ ಅಧಿನಿಯಮ, 1908ನ್ನು (1908ರ ಕೇಂದ್ರ ಅಧಿನಿಯಮ 16) ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಲ್ಲಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ ಮತ್ತು ಕೆಲವು ಆನುಷಂಗಿಕ ತಿದ್ದುಪಡಿಯನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ವಿ.ಶ್ರೀನಿವಾಸ ಪ್ರಸಾದ್**
ಕಂದಾಯ ಸಚಿವರು

**ಪಿ. ಓಂಪ್ರಕಾಶ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ನೋಂದಣಿ ಅಧಿನಿಯಮ, 1908ರ

## (1908ರ ಕೇಂದ್ರ ಅಧಿನಿಯಮ 16) ಉದ್ಧೃತ ಭಾಗ

**XXX XXX XXX**

**32. ನೋಂದಣಿಗಾಗಿ ದಸ್ತಾವೇಜುಗಳನ್ನು ಹಾಜರುಪಡಿಸುವ ವ್ಯಕ್ತಿಗಳು.–** 31, 88 ಮತ್ತು 89ನೇ ಪ್ರಕರಣದಗಳಲ್ಲಿ ನಮೂದಿಸಿದ ಸಂದರ್ಭದಲ್ಲಿ ಹೊರತು ಈ ಅಧಿನಿಯಮದ ಮೇರೆಗೆ ನೋಂದಣಿಯಾಗಬೇಕಾದ ಪ್ರತಿಯೊಂದು ದಸ್ತಾವೇಜನ್ನು ಅಂಥ ನೋಂದಣಿಯು ಕಡ್ಡಾಯವಾಗಿರಲಿ ಅಥವಾ ಐಚ್ಛಿಕವಾಗಿರಲಿ ಸರಿಯಾದ ನೋಂದಣಿ ಕಚೇರಿಯಲ್ಲಿದೆ.–

(ಎ) ಅದನ್ನು ಬರೆದುಕೊಡುವ ಅಥವಾ ಅದರ ಮೇರೆಗೆ ಕ್ಲೇಮು ಮಾಡುವ ಅಥವಾ ಡಿಕ್ರಿ ಅಥವಾ ಆದೇಶದ ಪ್ರತಿಯ ಸಂದರ್ಭದಲ್ಲಿ ಆ ಡಿಕ್ರತಿ ಅಥವಾ ಆದೇಶದ ಮೇರೆಗೆ ಕ್ಲೇಮು ಮಾಡುವ ವ್ಯಕ್ತಿಯು; ಅಥವಾ

(ಬಿ) ಅಂಥ ವ್ಯಕ್ತಿಯ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವು;

(ಸಿ) ಅಂಥ ವ್ಯಕ್ತಿಯ ಏಜೆಂಟನು ಅಥವಾ ಇಲ್ಲಿ ಇನ್ನು ಮುಂದೆ ನಮೂದಿಸಿದ ರೀತಿಯಲ್ಲಿ ಬರೆದುಕೊಟ್ಟ ಮತ್ತು ಅಇಕಪ್ರಮಾಣಗೊಳಿಸಿದ ಮುಖ್ತ್ಯಾರನಾಮೆ ಮೂಲಕ ಕ್ರಮಬದ್ಧವಾಗಿ ಅಧಿಕೃತನಾದ ಪ್ರತಿನಿಧಿ ಅಥವಾ ಹಸ್ತಾಂತರ ಪಡೆದವರು ಹಾಜರು ಪಡಿಸತಕ್ಕದ್ದು.

**XXX XXX XXX**

**34. ನೋಂದಣಿಗೆ ಮುಂಚೆ ನೋಂದಣಿ ಅಧಿಕಾರಿಯಿಂದ ವಿಚಾರಣೆ.–** (1)ಈ ಭಾಗದಲ್ಲಿ ಮತ್ತು 41,43,45,69,75,77,88 ಮತ್ತು 89ನೇ ಪ್ರಕರಣಗಳಲ್ಲಿ ಅಡಕಗೊಂಡಿರುವ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಯಾವುದೇ ದಸ್ತಾವೇಜನ್ನು, ಅಂಥ ದಸ್ತಾವೇಜನ್ನು ಬರೆದುಕೊಡುವ ವ್ಯಕ್ತಿಗಳು ಅಥವಾ ಅವರ ಪ್ರತಿನಿಧಿಗಳು, ಹಸ್ತಾಂತರ ಪಡೆದವರು ಅಥವಾ ಹಿಂದೆ ಹೇಳಿದಂತೆ ಅಧಿಕೃತವಾದ ಏಜೆಂಟರು 23,24,25 ಮತ್ತು 26ನೇ ಪ್ರಕರಣಗಳ ಮೇರೆಗೆ ಹಾಜರುಪಡಿಸುವುದಕ್ಕೆ ಅನುಮತಿಸಿದ ಕಾಲದೊಳಗೆ ನೋಂದಣಿ ಅಧಿಕಾರಿಯ ಮುಂದೆ ಹಾಜರಾಗದ ಹೊರತು, ನೋಂದಣಿ ಮಾಡತಕ್ಕದ್ದಲ್ಲ.

ಪರಂತು, ಜರೂರು ಅಗತ್ಯತೆ ಅಥವಾ ಅನಿವಾರ್ಯ ಆಕಸ್ಮಿಕದ ಕಾರಣದಿಂದಾಗಿ ಎಲ್ಲಾ ವ್ಯಕ್ತಿಗಳು ಹಾಗೆ ಹಾಜರಾಗದಿದ್ದರೆ ರಿಜಿಸ್ಟ್ರಾರನು ಹಾಜರಾಗುವುದರಲ್ಲಿನ ವಿಳಂಬವು ತಿಂಗಳುಗಳನ್ನು

ಮೀರದ ಸಂದರ್ಭಗಳಲ್ಲಿ, ರಿಜಿಸ್ಟ್ರಾರನು, 25ನ ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಜುಲ್ಮಾನೆ ಯಾವುದಾದರೂ ಇದ್ದರೆ, ಅದರ ಜೊತಗೆ, ಸರಿಯಾದ ನೋಂದಣಿ ಫೀಜಿನ ಮೊಬಲಗಿನ ಹತ್ತರಷ್ಟಕ್ಕೆ ಮೀರದ ಜುಲ್ಮಾನೆಯನ್ನು ಸಂದಾಯ ಮಾಡಿದ ಮೇಲೆ ದಸ್ತಾವೇಜನ್ನು ನೋಂದಣಿ ಮಾಡಬಹುದೆಂದು ನಿರ್ದೇಶಿಸಬಹುದು.

**XXX XXX XXX**

(3) ನೋಂದಣಿ ಅಧಿಕಾರಿಯು ಆನಂತರ–

**XXX XXX XXX**

(ಸಿ) ಪ್ರತಿನಿಧಿಯಾಗಿ, ಹಸ್ತಾಂತರ ಪಡೆದವನಾಗಿ ಅಥವಾ ಏಜೆಂಟನಾಗಿ ಹಾಜರಾಗುವ ಯಾವನೇ ವ್ಯಕ್ತಿಯ ಸಂದರ್ಭದಲ್ಲಿ ಹಾಗೆ ಹಾಜರಾಗಲು ಅಂಥ ವ್ಯಕ್ತಿಯ ಹಕ್ಕಿನ ಬಗ್ಗೆ ಸ್ವತ: ಮನದಟ್ಟು ಮಾಡಿಕೊಳ್ಳತಕ್ಕದ್ದು.

(4) (1)ನೇ ಉಪ–ಪ್ರಕರಣದ ಪರಂತುಕದ ಮೇರೆಗಿನ ನಿರ್ದೇಶನಕ್ಕಾಗಿನ ಯಾವುದೇ ಅರ್ಜಿಯನ್ನು ಸಬ್‌ರಿಜಿಸ್ಟ್ರಾರನ ಮುಂದೆ ಮಾಡಿಕೊಳ್ಳಬಹುದು. ಅವನು ತಾನು ಅಧೀನನಾಗಿರುವ ಆ ರಿಜಿಸ್ಟ್ರಾರನಿಗೆ ಅದನ್ನು ತತ್‌ಕ್ಷಣವೇ ಕಳುಹಿಸತಕ್ಕದ್ದು

**XXX XXX XXX**

**35. ಅನುಕ್ರಮವಾಗಿ ಬರೆದುಕೊಡುವುದನ್ನು ಒಪ್ಪುವ ಮತ್ತು ನಿರಾಕರಿಸುವುದರ ಮೇಲೆ ಪ್ರಕ್ರಿಯೆ.–** (1) (ಎ) ದಸ್ತಾವೇಜನ್ನು ಬರೆದುಕೊಡುವ ಎಲ್ಲಾ ವ್ಯಕ್ತಿಗಳು ನೋಂದಣಿ ಅಧಿಕಾರಿಯ ಮುಂದೆ ಖುದ್ದಾಗಿ ಹಾಜರಾದರೆ ಮತ್ತು ಅವನಿಗೆ ಖುದ್ದಾಗಿ ಗೊತ್ತಿದ್ದರೆ ಅಥವಾ ಆ ವ್ಯಕ್ತಿಗಳು ತಾವೇ ಎಂದು ಹೇಳಿಕೊಳ್ಳುವ ವ್ಯಕ್ತಿಗಳಾಗಿದ್ದಾರೆಂದು ಅನ್ಯಥಾ ಮನದಟ್ಟಾದರೆ ನೋಂದಣಿ ಅಧಿಕಾರಿಯ

**XXX XXX XXX**

(2) ನೋಂದಣಿ ಅಧಿಕಾರಿಯು, ತನ್ನ ಮುಂದೆ ಹಾಜರಾಗುವ ವ್ಯಕ್ತಿಗಳು ತಾವೆಂದು ಹೇಳಿಕೊಳ್ಳುವ ವ್ಯಕ್ತಿಗಳಾಗಿದ್ದಾರೆಂದು ಮನದಟ್ಟು ಮಾಡಿಕೊಳ್ಳುವುದಕ್ಕಾಗಿ ಅಥವಾ ಈ ಅಧಿನಿಯಮದ ಮೂಲಕ ಆಲೋಚಿಸಲಾದ ಯಾವುದೇ ಇತರ ಉದ್ದೇಶಕ್ಕಾಗಿ ಅವರ ಕಚೇರಿಯಲ್ಲಿ ಹಾಜರಿರುವ ಯಾವನನ್ನೇ ಆಗಲಿ ಪರೀಕ್ಷಿಸಬಹುದು."

**XXX XXX XXX**

**69. ನೋಂದಣಿ ಕಚೇರಿಗಳನ್ನು ಅಧೀಕ್ಷಿಸಲು ಮತ್ತು ನಿಯಮಗಳನ್ನು ರಚಿಸಲು ಇನ್‌ಸ್ಪೆಕ್ಟ್ರ ಜನರಲ್ಲದ ಅಧಿಕಾರ.–** (1) ಇನ್‌ಸ್ಪೆಕ್ಟರ್ ಜನರಲ್ಲನ್ನು ರಾಜ್ಯಸರ್ಕಾರದ ಅಧೀನದಲ್ಲಿರುವ ರಾಜ್ಯ ಕ್ಷೇತ್ರಗಳಲ್ಲಿರುವ ಎಲ್ಲಾ ನೋಂದಣಿ ಕಚೇರಿಗಳ ಮೇಲೆ ಸಾಮಾನ್ಯ ಅಧೀಕ್ಷಣೆ ನಡೆಸತಕ್ಕದ್ದು ಮತ್ತು;

XXX XXX XXX

"(ಎಲ್) ಸಂಗ್ರಹಿಸುವುದು, ಪುನ: ಪಡೆಯುವುದು ಮತ್ತು ಸಂರಕ್ಷಣೆಯನ್ನು ಒಳಗೊಂಡಂತೆ, ಮೈಕ್ರೋ ಫಿಲ್ಮಿಂಗ್ ಯುನಿಟ್, ಗಣಕಯಂತ್ರಗಳು, ಸ್ಕ್ಯಾನರ್‌ಗಳು, ಫ್ಲಾಪಿಗಳು, ಹಾರ್ಡ್‌ಡಿಸ್ಕ್‌ಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು ಮತ್ತು ಪ್ರಿಂಟರ್ಸ್‌ನಂತಹ ವಿದ್ಯುನ್ಮಾನ ಅಥವಾ ಇತರ ಉಪಕರಣಗಳನ್ನು ಬಳಸುವ ಮೂಲಕ 70–ಸಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಂದಣಿ ಪ್ರಕ್ರಿಯೆಯನ್ನು ಮತ್ತು ದಸ್ತಾವೇಜುಗಳನ್ನು ಕ್ರಮಾನುಕರಣೆ ಮಾಡುವ ಮತ್ತು ಪ್ರಮಾಣಿತ ಪ್ರತಿಗಳು, ಪೂರ್ವಾದಿ ಪ್ರಮಾಣ ಪತ್ರಗಳನ್ನು ನೀಡುವ ವಿಧಾನವನ್ನೂ ನಿಯಂತ್ರಿಸುವುದು.

XXX XXX XXX

**89. ಕೆಲವು ಆದೇಶಗಳ, ಪ್ರಮಾಣ ಪತ್ರಗಳ ಮತ್ತು ಪತ್ರಗಳ ಪ್ರತಿಗಳನ್ನು ನೋಂದಣಿ ಅಧಿಕಾರಿಗೆ ಕಳುಹಿಸತಕ್ಕದು ಮತ್ತು ಅವುಗಳನ್ನು ದಾಖಲ್ಮಾಡತಕ್ಕದ್ದು.–** XXX XXX XXX

(2) ಸಿವಿಲ್ ಪ್ರಕ್ರಿಯ ಸಂಹಿತೆ 1908ರ (1908ರ 5) ಮೇರೆಗೆ ಸ್ಥಿರಸ್ವತ್ತಿನ ಮಾರಾಟಸ ಪ್ರಮಾಣ ಪತ್ರವನ್ನು ಮಂಜೂರ್ಮಾಡಲು ಪ್ರತಿಯೊಂದು ನ್ಯಾಯಾಲಯವು ಅಂಥ ಪ್ರಮಾಣಪತ್ರದಲ್ಲಿ ಒಳಗೊಂಡ ಸ್ಥಿರಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವು ಯಾವ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವುದೋ ಆ ನೋಂದಣಿ ಅಧಿಕಾರಿಗೆ ಅಂಥ ಪ್ರಮಾಣಪತ್ರದ ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅನದನು ಅವನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲು ಮಾಡತಕ್ಕದ್ದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಪಿ7, ಕಾಸೂ , 750–ಪ್ರತಿಗಳು 27ನೇ ಮಾರ್ಚ್, 2015

**KARNATAKA LEGISLATIVE ASSEMBLY**

**FOURTEENTH LEGISLATIVE ASSEMBLY**

**SIXTH SESSION**

**(ADJOURNED MEETINGS)**

# THE REGISTRATION (KARNATAKA AMENDMENT) BILL 2015

**(L.A. Bill No. 15 of 2015)**

A Bill to amend the Registration Act 1908 in its application to the State of Karnataka.;

Whereas it is expedient further to amend the Registration Act 1908 (Central Act 16 of 1908) in its application to the state of Karnataka for the purposes hereinafter appearing;

Be it enacted by the Karnataka State Legislature in the sixty-sixth year of the Republic of India as follows:-

**1. Short title, extent and commencement.-** (1) This Act may be called the Registration (Karnataka Amendment) Act, 2015

(2) It extends to the whole of the State of Karnataka.

(3) It shall come into force on such date as the State Government may appoint, by notification in the Official Gazette.

**2. Amendment of section 32.-** In the Registration Act, 1908 (Central Act 16 of 1908) (hereinafter referred to as the principal Act) in section 32, for the word and figures "and 89", the words and figures "89 or when the document is presented by electronic means," shall be substituted.

**3. Amendment of section 34**.- In section 34 of the principal Act,-

(a) in sub-section (1), after the proviso, the following shall be inserted, namely:-

"Provided further that, when such document is presented by electronic means, the personal appearance before the registering officer shall not be required."

(b) in sub-section (3), after clause (c), the following shall be inserted, namely:-

"Provided further that, when such document is presented by electronic means, the enquiry shall be done in such manner as may be prescribed".

**4. Amendment of section 35.-** In section 35 of the principal Act,-

(a) in sub-section (1), in clause (a), after the words "appear personally" the words "or the document is executed through electronic means, as the case may be", shall be inserted.

(b) in sub-section (2), the following proviso shall be inserted, namely:-

"Provided that, when such document is presented by electronic means, the procedure shall be such as may be prescribed and registering officer shall follow the procedure for the examination of person."

**5. Amendment of section 69.-** In section 69 of the principal Act, in sub-section (1), after clause (l), the following clause shall be inserted, namely:-

"(m) regulating the procedure for presentation of document, appearance for admission, endorsement, manner of fixing signature and seal, mode of payment of registration fees and other fees and such other process as may be prescribed when the document is presented by electronic means."

**6. Amendment of section 89.-** In section 89 of the principal Act,-

(i) for sub-section (2) and the entries relating thereto, the following shall be substituted, namely:-

"(2) Every Court, granting Order or Decree or Certificate of Sale affecting immovable property under the Code of Civil procedure, 1908 (Central Act 5 of 1908), shall send an attested copy either physically/manually or by electronic means of such Order or Decree or Certificate of Sale to the Registering officer within the local limits of whose jurisdiction the whole or any part of the immovable property comprised in such Order or Decree or Sale Certificate is situate and such officer shall file the copy in his Book No.1 or shall scan, store and preserve in the electronic or other device, as the case may be.

Provided that, where the immovable property is situate within the local limits of the jurisdiction of more than one Registry Office, the procedure laid down in sections 64 to 66 shall be followed."

(ii) after sub-section (4) and the entries relating thereto, the following shall be inserted, namely:-

"(5) Banks or other Financial Institutions granting loans, wherein immovable property is mortgaged, by way of Simple Mortgage Deeds under the Karnataka Agricultural Credit Operations and Miscellaneous Provisions Act, 1974 (Karnataka Act 2 of 1975) and Deposit of Title Deeds under section 58(f) of the Transfer of Property Act 1882 (Act No. IV of 1882), for the purpose of securing repayment of the loans, shall send attested copy of such deed or letter or note or memorandum containing the full description of the properties, the parties and other details

comprised therein, including the Discharge Deeds, either physically/manually or by electronic means to the Registering officer within whose jurisdiction the whole or any part of the property is situate and the Registering officer shall file such letter or note or memorandum in Book No. 1 or shall scan, store and preserve in the electronic or other device, as the case may be.

Provided that, where the immovable property is situate within the local limits of the jurisdiction of more than one Registry Office, the procedure laid down in sections 64 to 66 shall be followed."

## STATEMENT OF OBJECTS AND REASON

To give effect to the proposals made in the budget speech of 2015-16, it is considered necessary to amend the Registration Act, 1908, (Central Act 16 of 1908) in its application to the State of Karnataka to provide for online registration of Agreement for sale, Lease Deed and Leave and License Agreements and for online filing of true copies of Court Orders, Decrees and Mortgages by way of Deposit of Title Deeds etc., sent by Banks and other Financial Institutions and to make certain consequential amendments.

Hence the Bill.

**FINANCIAL MEMORANDUM**

There is no extra expenditure involved in the proposed legislative measure.

**V. SRINIVASA PRASAD**
Minister for Revenue

**P. OMPRAKASHA**
Secretary
Karnataka Legislative Assembly

**ANNEXURE**

## THE EXTRACT FROM THE REGISTRATION ACT, 1908 (CENTRAL ACT 16 OF 1908)

**XXX XXX XXX**

**32. Persons to present documents for registration.-**Except in the cases mentioned in 1*[sections 31, 88 and 89], every document to be registered under this Act, whether such registration be compulsory or optional, shall be presented at the proper registration-office,--

(a) by some person executing or claiming under the same, or, in the case of a copy of a decree or order, claiming under the decree or order, or

(b) by the representative or assign of such person, or

(c) by the agent of such person, representative or assign, duly authorized by power-of-attorney executed and authenticated in manner hereinafter mentioned.

**XXX XXX XXX**

**34. Enquiry before registration by registering officer.-**(1) Subject to the provisions contained in this Part and in sections 41,43, 45, 69, 75, 77, 88 and 89, no document shall be registered under this Act, unless the persons executing such document, or their representatives, assigns or agents authorized as aforesaid, appear before the registering officer within the time allowed for presentation under sections 23, 24, 25 and 26:

Provided that, if owing to urgent necessity or unavoidable accident all such persons do not so appear, the Registrar, in cases where the delay in appearing does not exceed four months, may direct that on payment of a fine not exceeding ten times the amount of the proper registration fee, in addition to the fine, if any, payable under section 25, the document may be registered.

**XXX XXX XXX**

(3) The registering officer shall thereupon— **XXX XXX**

(c) in the case of any person appearing as a representative, assign or agent, satisfy himself of the right of such person so to appear.

(4) Any application for a direction under the proviso to sub-section (1) may be lodged with a Sub-Registrar, who shall forthwith forward it to the Registrar to whom he is subordinate.

**XXX XXX XXX**

**35. Procedure on admission and denial of execution respectively.-** (1) (a) If all the persons executing the document appear personally before the registering officer and are personally known to him, or if he be otherwise

satisfied that they are the persons they represent themselves to be, and if they all admit the execution of the document, or

**XXX XXX XXX**

(2) The registering officer may, in order to satisfy himself that the persons appearing before him are the persons they represent themselves to be, or for any other purpose contemplated by this Act, examine any one present in his office.

**XXX XXX XXX**

**69. Power of Inspector-General to superintend registration offices and make rules.-**(1) The Inspector-General shall exercise a general superintendence over all the registration-offices in the territories under the State Government, and shall have power from time to time to make rules consistent with this Act—

**XXX XXX XXX**

(l) regulating the process of registration referred to in sub-section (1) of section 70-C by using electronic or other devices like microfilming unit, computers, scanners, floppies, hard disks, compact disks and printers including storage, retrieval and preservation and also the manner in which documents are indexed and certified copies, encumbrance certificates issued.

**XXX XXX XXX**

**89. Copies of certain orders, certificates and instruments to be sent to registering officers and filed.-** (1) **XXX XXX XXX**

(2) Every Court granting a certificate of sale of immovable property under the Code of Civil Procedure, 1908 (5 of 1908), shall send a copy of such certificate to the registering officer within the local limits of whose jurisdiction the whole or any part of the immovable property comprised in such certificate is situate, and such officer shall file the copy in his Book No. 1.

(3) **XXX XXX XXX**

(4) Every Revenue-officer granting a certificate of sale to the purchaser of immovable property sold by public auction shall send a copy of the certificate to the registering officer within the local limits of whose jurisdiction the whole or any part of the property comprised in the certificate is situate, and such officer shall file the copy in his Book No. 1.39 Exemptions from Act.

Government Press, Vikasa Soudha, Bengaluru, P7, W.D. , Copies 750, 27th March, 2015